# ರಿಟರ್ನಿಂಗ್ ಅಧಿಕಾರಿ, ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ನಂ. 30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011 ಇದರ ನಡಾವಳಿಗಳು**

## ಚುನಾವಣಾ ಸೂಚನಾ ಪತ್ರ

## ನಮೂನೆ – XII

**(ಕ.ಸ.ಸ. ನಿಯಮಗಳು 1960ರ ನಿಯಮ 14(3) ರಡಿಯಲ್ಲಿ)**

ಕರ್ನಾಟಕ ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ : ಸಚುಪ್ರಾ/ಬೆಂ/ಜಂನಿ/ಆಮಂಚುರಿಆನೇ/10/2019-20 ದಿನಾಂಕ : 29-11-2019ರನ್ವಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಹಾಗೂ 2012ರ ತಿದ್ದುಪಡಿ ಅಧಿನಿಯಮದ ಕಲಂ 39ಎ(1) ಮತ್ತು 39ಎ (2) ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ 13ಇ ರ ನಿಯಮದನ್ವಯ **ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.,** ಬೆಂಗಳೂರು ಇದರ ದಿನಾಂಕ : 15-02-2020 ರಿಂದ ಮುಂದಿನ ಐದು ವರ್ಷಗಳ ಅವಧಿಗೆ ಬ್ಯಾಂಕಿನ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಆಯ್ಕೆ ಮಾಡಲು **ದಿನಾಂಕ 02-02-2020ರ ಭಾನುವಾರದಂದು ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಭಾರತ್ ಎಜುಕೇಷನ್ ಸೊಸೈಟಿ ನಿ., 16ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.** ಇಲ್ಲಿ ಚುನಾವಣೆಯನ್ನು ನಡೆಸಲು ನಿಗದಿಪಡಿಸಿದೆ.

ಬ್ಯಾಂಕಿನ ನಿರ್ದೇಶಕರ ಸಾಮಾನ್ಯ ಚುನಾವಣೆಗೆ ಬೈಲಾ ಸಂಖ್ಯೆ 46.1ರ ರೀತ್ಯಾ ಚುನಾಯಿಸಬೇಕಾದ ನಿರ್ದೇಶಕರ ಸಂಖ್ಯೆ **18 (ಹದಿನೆಂಟು)** ಇದ್ದು, ಇದರಲ್ಲಿ ಸ್ಥಾನಗಳ ವರ್ಗೀಕರಣ ಕೆಳಕಂಡಂತಿದೆ.

| | | |
|---|---|---|
| 1 | ಸಾಮಾನ್ಯ ಸ್ಥಾನಗಳು | 12 (ಹನ್ನೆರಡು) |
| 2 | ಪರಿಶಿಷ್ಟ ಜಾತಿಗೆ ಮೀಸಲಿರುವ ಸ್ಥಾನಗಳ ಸಂಖ್ಯೆ | 1 (ಒಂದು) |
| 3 | ಪರಿಶಿಷ್ಟ ಪಂಗಡಕ್ಕೆ ಮೀಸಲಿರುವ ಸ್ಥಾನಗಳ ಸಂಖ್ಯೆ | 1 (ಒಂದು) |
| 4 | ಮಹಿಳೆಯರಿಗಾಗಿ ಮೀಸಲಿರುವ ಸ್ಥಾನಗಳ ಸಂಖ್ಯೆ | 2 (ಎರಡು) |
| 5 | ಹಿಂದುಳಿದ ವರ್ಗಕ್ಕೆ ಮೀಸಲಿರುವ ಸ್ಥಾನಗಳ ಸಂಖ್ಯೆ 2 (ಎರಡು)<br>ಇದರಲ್ಲಿ :<br>ಅ) ಪ್ರವರ್ಗ 'ಎ'<br>ಆ) ಪ್ರವರ್ಗ 'ಬಿ' | <br><br>1 (ಒಂದು) ಸ್ಥಾನ<br>1 (ಒಂದು) ಸ್ಥಾನ |

**ಈ ಚುನಾವಣೆಯ ವೇಳಾಪಟ್ಟಿ ಈ ಕೆಳಗಿನಂತೆ ಇರುತ್ತದೆ ಎಂದು ಈ ಚುನಾವಣಾ ಪತ್ರ ನೀಡಲಾಗಿದೆ.**

### ಚುನಾವಣಾ ವೇಳಾಪಟ್ಟಿ

| | | |
|---|---|---|
| 1. | ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ 20-01-2020 ಸೋಮವಾರದಿಂದ ಬೆಳಿಗ್ಗೆ 11-00 ರಿಂದ ಸಂಜೆ 5-00 ಗಂಟೆಯವರೆಗೆ ರಿಟರ್ನಿಂಗ್ ಅಧಿಕಾರಿಯವರಿಗೆ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 2. | ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14 ಎ) | ದಿನಾಂಕ 24-01-2020 ಶುಕ್ರವಾರ ಸಂಜೆ 5-00 ಗಂಟೆಯವರೆಗೆ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |

| | | |
|---|---|---|
| 3. | ರಿಟರ್ನಿಂಗ್ ಅಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14 ಬಿ) | ದಿನಾಂಕ 25-01-2020 ಶನಿವಾರ<br>ಬೆಳಿಗ್ಗೆ 11-00 ಗಂಟೆಯಿಂದ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 4. | ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ - ರಿಟರ್ನಿಂಗ್ ಅಧಿಕಾರಿಯಿಂದ (ನಿಯಮ 14 ಬಿ (4) | ದಿನಾಂಕ 25-01-2020 ಶನಿವಾರ<br>ನಾಮಪತ್ರ ಪರಿಶೀಲನೆ ನಂತರ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 5. | ಸ್ಪರ್ಧಾ ಕಣದಲ್ಲಿರುವ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ (ನಿಯಮ 14 ಸಿ) | ದಿನಾಂಕ 26-01-2020 ಭಾನುವಾರ<br>ಮಧ್ಯಾಹ್ನ 3-00 ಗಂಟೆಯವರೆಗೆ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 6. | ಸ್ಪರ್ಧಾ ಕಣದಲ್ಲಿ ಉಳಿದ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ-ರಿಟರ್ನಿಂಗ್ ಅಧಿಕಾರಿಯಿಂದ (ನಿಯಮ 14 ಡಿ) | ದಿನಾಂಕ 26-01-2020 ಭಾನುವಾರ<br>ಮಧ್ಯಾಹ್ನ 3-00 ಗಂಟೆಯ ನಂತರ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 7. | ಅಗತ್ಯವಾದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು (ನಿಯಮ 14 ಇ) | ದಿನಾಂಕ 26-01-2020 ಭಾನುವಾರ<br>ಮಧ್ಯಾಹ್ನ 3-00 ಗಂಟೆಯ ನಂತರ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 8. | ಚಿಹ್ನೆಯ ಸಹಿತ ಸ್ಪರ್ಧೆಯಲ್ಲಿರುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14 ಇ) | ದಿನಾಂಕ 26-01-2020 ಭಾನುವಾರ<br>ಮಧ್ಯಾಹ್ನ 3-00 ಗಂಟೆಯ ನಂತರ<br>ಸ್ಥಳ : ಬ್ಯಾಂಕಿನ ಕೇಂದ್ರ ಕಛೇರಿ |
| 9. | ಚುನಾವಣೆ ದಿನಾಂಕ ಮತ್ತು ಸಮಯ, ಸ್ಥಳ | **ದಿನಾಂಕ 02-02-2020 ಭಾನುವಾರ<br>ಬೆಳಿಗ್ಗೆ 9-00 ಗಂಟೆಯಿಂದ<br>ಸಂಜೆ 4-00 ಗಂಟೆವರೆಗೆ<br>ಭಾರತ್ ಎಜುಕೇಷನ್ ಸೊಸೈಟಿ ನಿ.<br>16ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ಜಯನಗರ,<br>ಬೆಂಗಳೂರು-560 011** |
| 10. | ಮತಗಳ ಎಣಿಕೆಯ ದಿನಾಂಕ ಮತ್ತು ಸಮಯ | ದಿನಾಂಕ 02-02-2020 ಭಾನುವಾರ<br>ಮತದಾನ ಅವಧಿ ಮುಗಿದ ನಂತರ ಮೇಲಿನ<br>ಮತದಾನ ನಡೆದ ಸ್ಥಳದಲ್ಲಿ |
| 11. | ರಿಟರ್ನಿಂಗ್ ಅಧಿಕಾರಿಗಳಿಂದ ಚುನಾವಣೆ ಫಲಿತಾಂಶ | ಮತ ಎಣಿಕೆಯು ಮುಗಿದ ನಂತರ |

**ಸಾಮಾನ್ಯ ಸೂಚನೆಗಳು :-**

1. ಚುನಾವಣೆಯಲ್ಲಿ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ನಾಮಪತ್ರಗಳನ್ನು ಕೆಲಸದ ವೇಳೆಯಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಂದ / ಅವರಿಂದ ಅಧಿಕಾರ ಪಡೆದಿರುವವರಿಂದ ಪಡೆಯಬಹುದು.
2. ಬ್ಯಾಂಕಿನ ಉಪನಿಯಮ 46.1ರ ಪ್ರಕಾರ ಆಡಳಿತ ಮಂಡಳಿಗೆ ಒಟ್ಟು 18 ನಿರ್ದೇಶಕರನ್ನು ಮಾತ್ರ ಚುನಾಯಿಸಬೇಕಾಗಿರುತ್ತದೆ. ಕಲಂ 28ಎ(3)ರ ಪ್ರಕಾರ ಈ ಪೈಕಿ 01 (ಒಂದು) ಸ್ಥಾನ ಪರಿಶಿಷ್ಟ ಜಾತಿ ಸದಸ್ಯರಿಗೆ, 01 (ಒಂದು) ಸ್ಥಾನ ಪರಿಶಿಷ್ಟ ಪಂಗಡ ಸದಸ್ಯರಿಗೆ, 02 (ಎರಡು) ಸ್ಥಾನಗಳನ್ನು ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದ 02 (ಎರಡು) ಸ್ಥಾನಗಳಲ್ಲಿ ಪ್ರವರ್ಗ "ಎ" ಮತ್ತು ಪ್ರವರ್ಗ "ಬಿ" ವರ್ಗದವರಿಗೆ ತಲಾ ಒಂದು ಸ್ಥಾನವನ್ನು ಮೀಸಲಿರಿಸಲಾಗಿರುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ ಹಿಂದುಳಿದ ವರ್ಗದ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರಗಳ ಜೊತೆಯಲ್ಲಿ ತಾವು ಆ ವರ್ಗಕ್ಕೆ ಸೇರಿದವರೆಂಬ ರುಜುವಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಹಾಗೂ ಸಿಂಧುತ್ವವುಳ್ಳ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಸದಸ್ಯರು ತಮ್ಮ ನಾಮಪತ್ರದಲ್ಲಿ ತಾವು ಯಾವ ಸ್ಥಾನಕ್ಕೆ ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಹಿಂದುಳಿದ ವರ್ಗ ಪ್ರವರ್ಗ (ಎ ಮತ್ತು ಬಿ) ಬಗ್ಗೆ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಹೊರಡಿಸಿರುವ ಅಧಿಸೂಚನೆ ಆದೇಶ ಸಂಖ್ಯೆ ಗ್ರಾಅಪ/5/ಜಿಪಸ/95(1) ದಿನಾಂಕ 13-01-1995ರಲ್ಲಿ ನಿಗಧಿಪಡಿಸಿರುವಂತೆ

ಪ್ರವರ್ಗ "ಎ" ಮತ್ತು ಪ್ರವರ್ಗ "ಬಿ" ಗೆ ಸೇರಿರುವ ಜಾತಿಯವರಾಗಿರುತ್ತಾರೆಂಬ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ದೃಢೀಕರಣ ಪತ್ರವನ್ನು ಲಗತ್ತಿಸತಕ್ಕದ್ದು.

3. ಒಬ್ಬ ಸದಸ್ಯ ಒಂದು ವರ್ಗದ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದಲ್ಲಿ ಮೊದಲು ಸೂಚಿಸಿರುವ ಅಭ್ಯರ್ಥಿಯ ನಾಮಪತ್ರವನ್ನು ಅಂಗೀಕರಿಸಿ ಉಳಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
4. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯು ತಾನು ಸಲ್ಲಿಸುವ ನಾಮಪತ್ರದೊಂದಿಗೆ ರೂ. 2,000/- (ರೂಪಾಯಿ ಎರಡು ಸಾವಿರ ಮಾತ್ರ) ಮೊತ್ತವನ್ನು ಚುನಾವಣಾ ಠೇವಣಿ ಎಂದು ಇದೇ ಬ್ಯಾಂಕಿನಲ್ಲಿ ನಗದು ಪಾವತಿ ಮಾಡಿದ ರಶೀದಿಯನ್ನಾಗಲಿ ಅಥವಾ ಬ್ಯಾಂಕಿನ ಹೆಸರಿಗೆ ಪಡೆದ ಪಾವತಿ ಆದೇಶ/ಡಿಮ್ಯಾಂಡ್ ಡ್ರಾಫ್ಟ್‌ನ್ನಾಗಲಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಈ ಠೇವಣಿಯಲ್ಲಿ ಶೇಕಡ 50 ರಷ್ಟು ರಿಯಾಯಿತಿ ಇರುತ್ತದೆ. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಲಾಗುವುದು. ಚುನಾವಣಾ ಠೇವಣಿಯಲ್ಲಿ ಶೇ. 50 ರಿಯಾಯಿತಿ ಪಡೆಯಲು ಆ ವರ್ಗದವರು ಎಂಬ ಬಗ್ಗೆ ಕ್ರಮ ಸಂಖ್ಯೆ 2 ರಲ್ಲಿ ನಿಗಧಿಪಡಿಸಿರುವಂತೆ ಸರ್ಟಿಫಿಕೇಟನ್ನು ಸಲ್ಲಿಸತಕ್ಕದ್ದು.
5. ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳ 1/6 ರಷ್ಟು ಮತಗಳನ್ನು ಪಡೆಯದ ಸಾಮಾನ್ಯ ಅಭ್ಯರ್ಥಿಗಳ ಹಾಗೂ 1/10ರಷ್ಟು ಮತಗಳನ್ನು ಪಡೆಯದ ಮೀಸಲು ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಳ ಚುನಾವಣಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ನಾಮಪತ್ರಗಳ ನಮೂನೆಯನ್ನು ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
7. ನಾಮಪತ್ರಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳು ಹಾಜರಿರಬಹುದು.
8. ಸದಸ್ಯರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ.
9. ಸಹಕಾರ ಸಂಘಗಳ ತಿದ್ದುಪಡಿ ಕಾಯ್ದೆ, ನಿಯಮ ಮತ್ತು ಬೈಲಾ ಪ್ರಕಾರ ನಿರ್ದೇಶಕರ ಮಂಡಳಿಗೆ ಆಯ್ಕೆಯಾಗಬೇಕಾದಲ್ಲಿ ಯಾವುದೇ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.
10. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯು ತಾನು ಯಾವ ಸ್ಥಾನಕ್ಕೆ ಸ್ಪರ್ಧಿಸಲು ಇಚ್ಚಿಸುತ್ತೇನೆ ಎಂಬುದನ್ನು ಸ್ಪಷ್ಟವಾಗಿ/ನಿಖರವಾಗಿ ನಾಮಪತ್ರದಲ್ಲಿ ನಮೂದಿಸತಕ್ಕದ್ದು.
11. ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲಿಚ್ಚಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಖುದ್ದಾಗಿ ಅರ್ಜಿಯನ್ನು ಸಲ್ಲಿಸಿ ಉಮೇದುವಾರಿಕೆಯನ್ನು ವಾಪಸ್ಸು ಪಡೆಯಬಹುದು. ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಅರ್ಜಿಯನ್ನು ಸಲ್ಲಿಸಿದ ನಂತರ ಅಭ್ಯರ್ಥಿಗೆ ಅದನ್ನು ಯಾವುದೇ ಕಾರಣಕ್ಕೂ ಹಿಂಪಡೆಯಲು ಅಥವಾ ರದ್ದುಪಡಿಸಲು ಅವಕಾಶವಿರುವುದಿಲ್ಲ.
12. 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ 14(ಇ) ರ ಪ್ರಕಾರ ರಿಟರ್ನಿಂಗ್ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ (ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ) ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ. ಚುನಾವಣಾ ಚಿಹ್ನೆಯ ಹಂಚಿಕೆಯಲ್ಲಿ ರಿಟರ್ನಿಂಗ್ ಅಧಿಕಾರಿಯವರದೆ ಅಂತಿಮ ನಿರ್ಧಾರವಾಗಿರುತ್ತದೆ.
13. **ಪ್ರತಿಯೊಬ್ಬ ಅರ್ಹ ಮತದಾರ ಸದಸ್ಯರು ಮತದಾನದ ವೇಳೆಯಲ್ಲಿ ಬ್ಯಾಂಕಿನಿಂದ ನೀಡಲ್ಪಟ್ಟ ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.**
14. ಚುನಾವಣಾ ವೇಳಾ ಪಟ್ಟಿಯ ಕಾರ್ಯಕ್ರಮದ ಪ್ರಕಾರ ಸಾರ್ವತ್ರಿಕ ರಜೆ ಇದ್ದರೂ ಸಹ ಬ್ಯಾಂಕಿನ ಆಡಳಿತ ಕಛೇರಿಯು ಕಾರ್ಯನಿರ್ವಹಿಸುತ್ತದೆ.
15. ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರವು ಹೊರಡಿಸಿರುವ ನೀತಿ ಸಂಹಿತೆಯನ್ನು ಪಾಲಿಸತಕ್ಕದ್ದು.
16. ನಿಗಧಿತ ಸಮಯ ಮತ್ತು ಅವಧಿಯ ನಂತರ ನೀಡುವ ನಾಮಪತ್ರಗಳನ್ನು ಯಾವುದೇ ಕಾರಣದಿಂದಲೂ ಸ್ವೀಕರಿಸುವುದಿಲ್ಲ.

**ಸಹಿ/-**

**(ಹೆಚ್.ಪಿ. ಸದಾಶಿವ)**

**ರಿಟರ್ನಿಂಗ್ ಅಧಿಕಾರಿ**

**ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಹಾಗೂ**

**ಸಹಕಾರ ಅಭಿವೃದ್ಧಿ ಅಧಿಕಾರಿ**

**ಸಹಕಾರ ಸಂಘಗಳ ನಿಬಂಧಕರ ಕಛೇರಿ**

**ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು - 560 052**

ಸ್ಥಳ : ಬೆಂಗಳೂರು

ದಿನಾಂಕ : 10-01-2020